


ಎಡದಿಂದ ಬಲಕ್ಕೆ

1. ಸಮಯ ಎಂಥದೇ ಇದ್ದರೂ ತಾಳ್ಮೆ ಬೇಕೇ ಬೇಕು (3)
3. ಅವನಿಂದ ಕೇಳಿಬಂದ ವಿಷಯದಿಂದ ಬರೀ ಸಂತೋಷ (3)
4. ಕಾಡಿಗೆ ಕಳಿಸಿದರೂ ಅಷ್ಟೇ–ಮದ್ಯ ವ್ಯಸನಿ (3)
6. ಪರಶುರಾಮ ಕಂಡಾಗಲೆಲ್ಲ ನೆನಪಾಗುವ ಪ್ರಸಿದ್ಧ ಋಷಿ (4)
7. ರಣಭೂಮಿಗೆ ಒಯ್ದದ್ದು ಹತ್ತು ಕಿಲೋ ತೂಕ (4)
9. ಮಾನವೀಯ ಆಧಾರದಿಂದ ಕೊಟ್ಟದ್ದು–ಬದಲೀ ಪಡೆದದ್ದು (4)
11. ಸಾಹುಕಾರನ ಬಟ್ಟೆಗೂ ಇದೇ ಸಾಬೂನು (4)
15. ನೇರವಿರದ ವಸ್ತುಗಳನ್ನೆಲ್ಲ ಬೇರೆಡೆಗೆ ಸಾಗಿಸುವುದೇ? (3)
16. ಬಣ್ಣ ಬಣ್ಣವನ್ನೆಲ್ಲ ಬೆರೆಸಿದ ವಿವರಣೆ (3)
17. ಸುಮ್ಮನಿರುವುದೇ ಅಲ್ಲಿ ಭಾರೀ ಸಂತಸ (3)

ಮೇಲಿಂದ ಕೆಳಕ್ಕೆ

1. ದರ್ಭೆಯನ್ನು ಸಂಗ್ರಹಿಸಬೇಕಾದ ಪರಿಸ್ಥಿತಿ (3)
2. ಮರ್ಕಟದ ಕೈಯಲ್ಲಿ ರಾಜನ ಟೊಪ್ಪಿಗೆಯೇ? (3)
3. ಆ ಉಡುಪು ಕಂಡರೇ ಉನ್ಮಾದ ಬಂದೀತು (3)
5. ಕಂತಿನ ಸಾಲದ ನಿಯಮ ಬಹಳ ಕಷ್ಟಕರವಾಗಿದೆ (3)
6. ವೃದ್ಧಾಪ್ಯದಲ್ಲಾದರೂ ಲಭಿಸಿತಲ್ಲ ಗೌರವ ಸ್ಥಾನ (3)
8. ಮಕಾರ, ಹಕಾರ ಇದ್ದಂತೆಯೇ ರೇಫಕ್ಕಾದರೆ? (3)
10. ಆ ಮರದ ಹಣ್ಣು ತುಂಬ ಸಿಹಿ (3)
12. ಬೆಳೆದದ್ದನ್ನೇ ತಂದದ್ದು– ಈ ತರಕಾರಿ (3)
13. ನೆನಪಿಸುವ ಮೊದಲು ನೀರಲ್ಲಿ ತೋಯುವಂತೆ ಮಾಡು (3)
14. ವಿಪಿನವನ್ನೇ ನಡುಗಿಸಿದ ಗಾಳಿ ಇದು (3)

## ಪದಬಂಧ : 26-11-2009ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅನಾಯಾಸ; 3. ದಾನವ; 4. ಹರುಷ; 6. ನಿರುತ್ತರ; 7. ಆಣತಿ; 9. ಪ್ರಖರ; 11. ಯಮಳ; 13. ದಕ್ಷತೆ; 15. ಅಂತರ್ದಾನ; 17. ತ್ವರಿತ; 18. ಮರುಕ; 19. ರಜಾದಿನ.

ಮೇಲಿಂದ ಕೆಳಕ್ಕೆ:

1. ಅವನಿ; 2. ಸಹರ; 3. ದಾರುಣ; 5. ಷಣ್ಮುಖ; 7. ಆಲಯ; 8. ತಿರುಕ; 9. ಪ್ರಸಾದ; 10. ರಕ್ಷಿತೆ; 12. ಮಹತ್ವ; 14. ಕ್ಷಣಿಕ; 15. ಅಂತರ. 16. ನಮನ.

# ಖಗ- ಸೋಜಿಗ

"ಟೌಕಾನ್"-ಏನು ವಿಶೇಷ?

ಟೌಕಾನ್–ಅದೊಂದು ಹಕ್ಕಿ. ಕಂಡೊಡನೆಯೇ ಎದ್ದು ಕಾಣುವ ಒಂದು ವೈಲಕ್ಷಣ್ಯ– ಅದೇ ಈ ಹಕ್ಕಿಯ ವಿಶೇಷ. ಅದಕ್ಕೆ ಕಾರಣ ಟೌಕಾನ್‌ನ ಕೊಕ್ಕು. ಅಷ್ಟು ಉದ್ದದ, ಬೃಹದಾಕಾರದ, ಭಾರೀ ಶಿರೋಭಾರದ್ದೆನಿಸುವ ಅಂಥ ಕೊಕ್ಕನ್ನು ಹೊತ್ತು ಮುಖಕೆಳಗಾಗಿ ಈ ಹಕ್ಕಿ ಬಿದ್ದುಹೋಗದಿರುವುದು ಹೇಗೆ? ಆರಾಮವಾಗಿ ಹಾರಾಡಬಲ್ಲದು ಕೂಡ, ಹೇಗೆ? ಟೌಕಾನ್ ಬಗೆಗಿನ ಅತಿ ಕುತೂಹಲದ ಪ್ರಶ್ನೆ ಇದು.

ಟೌಕಾನ್ ಹಕ್ಕಿಯ ಯಾವುದೇ ಪ್ರಭೇದದ ಶರೀರದ ಉದ್ದಕ್ಕೆ, ಗಾತ್ರಕ್ಕೆ ಹೋಲಿಸಿದರೆ ಅದರ ಕೊಕ್ಕಿನ ಉದ್ದ–ಗಾತ್ರಗಳು ತೀರ ಅಧಿಕ. ಈ ಹಕ್ಕಿಯ ಕೊಕ್ಕಿನ ಉದ್ದ ಶರೀರದ ಉದ್ದದ ಮೂರರ ಒಂದಂಶ ಕನಿಷ್ಠ. ಕೆಲ ಪ್ರಭೇದಗಳಲ್ಲಿ ಕೊಕ್ಕಿನದು ಇಡೀ ಶರೀರದಷ್ಟೇ ಉದ್ದ. ಈ ಹಕ್ಕಿಯ ಪುಕ್ಕ–ಗರಿಗಳಂತೆಯೇ ಕೊಕ್ಕು ಕೂಡ ವರ್ಣಮಯವಾಗಿರುವುದು ಇನ್ನೊಂದು ವಿಶೇಷ.

ವಾಸ್ತವ ಏನೆಂದರೆ ಟೌಕಾನ್‌ನ ಕೊಕ್ಕು ಗಾತ್ರದಲ್ಲಷ್ಟೇ ದೊಡ್ಡದು; ತೂಕದಲ್ಲಿ ಅದು 'ಗರಿಯಷ್ಟು ಹಗುರ' ಹಾಗಿದ್ದರೂ ಗಟ್ಟಿತನದಲ್ಲಿ ಅದು ಬೇರೆ ಯಾವ ಹಕ್ಕಿ ಕೊಕ್ಕಿಗಿಂತ ಕಡಿಮೆಯಿಲ್ಲ. ಉದ್ದನಾದ, ದೊಡ್ಡದಾದ, ಗಟ್ಟಿಯಾದ ಆದರೆ ತುಂಬ ಹಗುರವಾದ ಟೌಕಾನ್ ಕೊಕ್ಕು ನಿಸರ್ಗದ ಒಂದು ಅದ್ಭುತ ಸೃಷ್ಟಿ; ಸೋಜಿಗದ ತಂತ್ರಜ್ಞಾನದ ಅನನ್ಯ ಸಮಷ್ಟಿ.

ಟೌಕಾನ್ ಕೊಕ್ಕು ಎರಡು ವಿಭಿನ್ನ ವಸ್ತುಗಳ, ಎರಡು ಭಿನ್ನ ಪದರಗಳ ಸಂಯೋಜಿತ ರಚನೆ. ನಮ್ಮ ಉಗುರಿನಂಥದೇ 'ಕೆರಟನ್'ನ ಪುಟ್ಟ ಪುಟ್ಟ ಷಡ್ಭುಜ ತಟ್ಟೆಗಳ ಜೋಣಣೆಯ ಒಂದು ಪದರ ಹೊರಗಿನದು. ಒಳಗಿನದು ಮೂಳೆ ವಸ್ತುವಿನ ಪದರ– ಅದೂ ಚಿಕ್ಕ ಚಿಕ್ಕ ತೊಲೆಗಳನ್ನು, ತೆಳ್ಳನ್ನ ಹಾಳೆಗಳನ್ನು ಜೋಡಿಸಿ, ಬಂಧಿಸಿ, ರೂಪಿಸಿದಂಥ ರಚನೆ. ಈ ಎರಡೂ



ಪದರಗಳ ನಡುವೆ ಅಲ್ಲಲ್ಲಿ ಟೊಳ್ಳು ಟೊಳ್ಳು. ಒಟ್ಟಾರೆ ದೊಡ್ಡ ಗಾತ್ರ. ಆದರೆ ತುಂಬ ಹಗುರ, ಸದೃಢ ಸ್ವರೂಪ. ಟೌಕಾನ್‌ನ ಆಹಾರ ಹಣ್ಣುಗಳು, ಕೀಟಗಳು ಪುಟ್ಟ ಹಾವುಗಳು ಮತ್ತು ಕೆಲ ಇತರ ಹಕ್ಕಿಗಳ ಮೊಟ್ಟೆ–ಮರಿಗಳು. ದಟ್ಟ ಎಲೆಗಳ ನಡುವೆ ಹಣ್ಣು ಹುಡುಕಲು– ಕೀಳಲು, ಬೇರೆ ಹಕ್ಕಿಗಳ ಗೂಡುಗಳೊಳಗಿಂದ ಮೊಟ್ಟೆಗಳನ್ನು ಹಿಡಿದು ತೆಗೆಯಲು, ಹಾವುಗಳನ್ನು ದೂರ ಹಿಡಿಯಲು ಇಂಥ ಕೊಕ್ಕು! ಉದ್ದನಾದ, ಗಟ್ಟಿಯಾದ, ಅಗಲವಾಗಿ ತೆರೆಯುವ, ಆದರೆ ಹಗುರವಾದ ಕೊಕ್ಕು! ಎಂಥ ಸೃಷ್ಟಿ!

ಟೌಕಾನ್ ಕುಟುಂಬದಲ್ಲಿ ನಲವತ್ತೆರಡು ಪ್ರಭೇದಗಳಿವೆ. ದಕ್ಷಿಣ ಅಮೆರಿಕದ ವೃಷ್ಟಿವನ ಅವುಗಳ ನೆಲೆ. ಅದೂ ಟೌಕಾನ್‌ಗಳ ಇನ್ನೊಂದು ವೈಶಿಷ್ಟ್ಯ.

■ ಎನ್. ವಾಸುದೇವ್